

# ಮನ ಸೆಳೆಯುವ ಸೂಜಿ ಹೂ

■ ಚಿತ್ರ–ಬರಹ:
**ಪ. ರಾಮಕೃಷ್ಣ ಶಾಸ್ತ್ರಿ**

**ಈ** ಗಿಡದಲ್ಲಿ ಮೊಗ್ಗು ಅಂಕುರಿಸಿದ ಮೇಲೆ ಹೂವಾಗಿ ಅರಳಲು ಮೂರು ತಿಂಗಳು ಬೇಕು. ಚೆಂಡಿನಂತಿರುವ ಹಸಿರು ಬಣ್ಣದ ಮೊಗ್ಗಿನಿಂದ ಒಂದೊಂದಾಗಿ ಎಳೆಗಳು ಹೊರಬಂದು ಹಳದಿ, ಕಿತ್ತಳೆ ಮಿಶ್ರಿತವಾದ ಬಣ್ಣದಿಂದ ಮೆರೆದು ಚಿತ್ತಾಕರ್ಷಕವಾಗುತ್ತದೆ. ವಿಶಾಲವಾಗಿ ಹರಡಿ ಬೆಳೆಯುವ ಗಿಡದ ಒಂದು ಕೊಂಬೆಯಲ್ಲಿ ಒಂದೇ ಹೂ ಅರಳುವುದು ವಾಡಿಕೆ. ಕೊಯ್ದ ಹೂವನ್ನು ಹಲವು ದಿನಗಳ ಕಾಲ ಬಾಡದಂತೆ ರಕ್ಷಿಸಬಹುದು. ಮಂಟಪಗಳ ಅಲಂಕಾರಕ್ಕೆ, ಅತಿಥಿಗಳ ಸ್ವಾಗತಕ್ಕೆ ಬೇಡಿಕೆಯಿರುವ ಇದಕ್ಕೆ ವಾಣಿಜ್ಯ ಮಾರುಕಟ್ಟೆಯಲ್ಲಿ ತುಂಬ ಬೆಲೆಯಿದೆ.

ಇದು ಸೂಜಿ ಹೂ. ಭಾರತದಲ್ಲಿಯೂ ಕೆಲವೆಡೆ ಇದನ್ನು ಬೆಳೆಯಲಾಗುತ್ತದೆ. ಉದ್ಯಾನಗಳಿಗೆ ಅಂದ ನೀಡುವ ಇದರ ಮೂಲ ದಕ್ಷಿಣ ಆಫ್ರಿಕ ಮತ್ತು ಆಸ್ಟ್ರೇಲಿಯಾ. ಪ್ರೊಟಿಯೇಸಿ ಸಸ್ಯ ಕುಟುಂಬಕ್ಕೆ ಸೇರಿರುವ ಅದನ್ನು ವೈಜ್ಞಾನಿಕವಾಗಿ ಲಿಯೊಕೊಸ್ಪೆರ್ಮಮ್ ಕಾರ್ಡಿಫೋಲಿಯಮ್ ಎಂದು ಕರೆಯುತ್ತಾರೆ. ದಳಗಳು ಸೂಜಿಯಂತೆ ಕಾಣುವ ಕಾರಣ ಸೂಜಿ ಹೂ ಎನ್ನುತ್ತಾರೆ. ಹಾಗೆಯೇ ಜರಿಯಂತೆ ಶೋಭಾಯಮಾನವಾಗಿರುವುದರಿಂದಾಗಿ ಜರಿ ಹೂ ಎಂದೂ ಹೇಳುವುದುಂಟು.

ಸೂಜಿ ಹೂ ತಂಪು ಹವೆಯನ್ನು ಬಯಸುವ ಸಸ್ಯ. ಅದು ಸಮುದ್ರ ಮಟ್ಟದಿಂದ ಒಂದು ಸಾವಿರ ಮೀಟರ್ ತನಕ ಯಾವುದೇ ಪ್ರದೇಶದಲ್ಲೂ ಚೆನ್ನಾಗಿ ಬೆಳೆಯುತ್ತದೆ. ಎಲೆಗಳು ಸುಮಾರಾಗಿ ಎಕ್ಕದ ಎಲೆಗಳ ಹೋಲಿಕೆ ಪಡೆದಿವೆ. ಸಾಧಾರಣ ಗಾತ್ರದ ಮರವಾಗುತ್ತದೆ. ಮರ ಮೃದುವಾಗಿರುವುದರಿಂದ ಹೆಚ್ಚಾಗಿ ಉರುವಲಿಗೆ ಬಳಕೆಯಾಗುತ್ತದೆ. ಗಿಡದ ತೊಗಟೆಯನ್ನು ಜಾನುವಾರುಗಳ ವ್ಯಾಧಿಗಳ ಚಿಕಿತ್ಸೆಗೆ ಬಳಸಲಾಗುತ್ತದೆ. ಬೀಜದ ತಿರುಳನ್ನು ಆಹಾರವಾಗಿ ಉಪಯೋಗಿಸುವ ಪದ್ಧತಿಯಿದೆ.

ಸೂಜಿ ಹೂವಿನಲ್ಲಿ ಧಾರಾಳವಾಗಿ ಮಕರಂದವಿದೆ. ಹಾಗಾಗಿ ಹಕ್ಕಿಗಳಿಗೆ ಬಹು ಇಷ್ಟ. ಉಭಯಲಿಂಗಿ ಹೂಗಳಿರುವುದರಿಂದ ವಂಶಾಭಿವೃದ್ಧಿಗೆ ತೊಡಕಿಲ್ಲ. ಹಣ್ಣುಗಳೂ ಹಕ್ಕಿಗಳಿಗೆ ಇಷ್ಟವಾದುದರಿಂದ ಬೀಜ ಪ್ರಸಾರದಲ್ಲಿ ಹಕ್ಕಿಗಳ ಪಾತ್ರ ಮುಖ್ಯವಾಗಿದೆ. ನಿಸರ್ಗವು ಈ ಹೂವಿಗೆ ತುಂಬಿದ ವರ್ಣ ಸಂಯೋಜನೆ ಅದರ ಆಕರ್ಷಣೆಯನ್ನು ಹೆಚ್ಚಿಸಿದೆ. ಸರಿಯಾಗಿ ಅರಳಿದಾಗ ಅದು ಒಂದು ಬಟ್ಟಲಿನಷ್ಟು ದೊಡ್ಡದಾಗುತ್ತದೆ.

ಸೂಜಿ ಹೂವಿನ ಗಿಡ ಬೀಜದಿಂದ ತಯಾರಾಗಿದ್ದರೆ ಹೂ ಬಿಡಲು ಎರಡು ವರ್ಷ ಬೇಕು. ಕಸಿ ಗಿಡ ಶೀಘ್ರದಲ್ಲಿ ಹೂ ಕೊಡುತ್ತದೆ. ಹೆಚ್ಚು ಬಿಸಿಲು ಇಷ್ಟವಾಗದು. ಬೇಸಿಗೆಯಲ್ಲಿ ನೀರು ಬೇಕು. ಭಾರತದ ಕೆಲವೆಡೆ ವಿರಳವಾಗಿ ಇದನ್ನು ಕಾಣಬಹುದು.